**ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ**
ಶ್ರೀ ಚಾಮರಾಜೇಂದ್ರ ಸಂಸ್ಕೃತ ಮಹಾವಿದ್ಯಾಲಯ ಆವರಣ
ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ, ಬೆಂಗಳೂರು – 560018.

**कर्नाटक–संस्कृत–विश्वविद्यालयः**
श्री चामराजेन्द्र संस्कृत महाविद्यालयस्य परिसरः
पम्पमहाकविमार्गः, चामराजपेटे, बेङ्गलूरु – ५६००१८.

## ೨೮.೦೩.೨೦೧೩ರಂದು ನಡೆದ ಪ್ರಶಾಸನ ಸಮಿತಿ ೧೩ನೇ ಸಭೆಯ ನಡಾವಳಿ

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯದ **ಪ್ರಶಾಸನ ಸಮಿತಿಯ ೧೩ನೇ ಸಭೆ**ಯು ಮಾನ್ಯ ಕುಲಪತಿಗಳ ಅಧ್ಯಕ್ಷತೆಯಲ್ಲಿ ಮಾರ್ಚ್ ೨೮, ೨೦೧೩ರ ಗುರುವಾರ ಮಧ್ಯಾಹ್ನ ೧೨.೩೦ ಗಂಟೆಗೆ **'ಕರ್ನಾಟಕ ರಾಜ್ಯ ಉನ್ನತ ಶಿಕ್ಷಣ ಪರಿಷತ್ ಸಭಾಂಗಣ, ಅರಮನೆ ರಸ್ತೆ, ಬೆಂಗಳೂರು'** ಇಲ್ಲಿ ನಡೆಯಿತು. ಈ ಸಭೆಯಲ್ಲಿ ಕೆಳಕಂಡ ಮಾನ್ಯ ಸದಸ್ಯರು ಹಾಜರಿದ್ದರು.

**ಹಾಜರಿದ್ದವರು:**

| | | |
|---|---|---|
| ೧. | **ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ,** ಮಾನ್ಯ ಕುಲಪತಿಗಳು | ಅಧ್ಯಕ್ಷರು |
| ೨. | **ಡಾ. ಎಚ್.ಆರ್. ವಿಶ್ವಾಸ್,** ಮಂಗಳೂರು | ಸದಸ್ಯರು |
| ೩. | **ಡಾ. ಪಿ.ಬಿ. ಸಂತಪ್ಪನವರ,** ಗುಲಬರ್ಗಾ | ಸದಸ್ಯರು |
| ೪. | **ಡಾ. ಟಿ.ಎಸ್. ಸತ್ಯವತಿ,** ಬೆಂಗಳೂರು | ಸದಸ್ಯರು |
| ೫. | **ಶ್ರೀ ಜಿ. ಹನುಮಂತರಾಯಪ್ಪ,** ತುಮಕೂರು | ಸದಸ್ಯರು |
| ೬. | **ಡಾ. ಎಸ್.ಆರ್. ಲೀಲಾ,** ಬೆಂಗಳೂರು | ಸದಸ್ಯರು |
| ೭. | **ಡಾ. ಶ್ರೀನಿವಾಸ ವರಖೇಡಿ,** ಡೀನ್, ಭಾಷಾ ನಿಕಾಯ | ಸದಸ್ಯರು |
| ೮. | **ಪ್ರೊ. ವೈ.ಎಸ್. ಸಿದ್ದೇಗೌಡ,** ಕುಲಸಚಿವರು | ಸದಸ್ಯ ಕಾರ್ಯದರ್ಶಿ |

**ಗೈರುಹಾಜರಿ:**

| | | |
|---|---|---|
| ೧. | **ಪ್ರಧಾನ ಕಾರ್ಯದರ್ಶಿಗಳು,** ಉನ್ನತ ಶಿಕ್ಷಣ ಇಲಾಖೆ, ಬೆಂಗಳೂರು | ಸದಸ್ಯರು |
| ೨. | **ಅಪರ ಮುಖ್ಯ ಕಾರ್ಯದರ್ಶಿಗಳು,** ಹಣಕಾಸು ಇಲಾಖೆ, ಬೆಂಗಳೂರು | ಸದಸ್ಯರು |
| ೩. | **ಕಾರ್ಯದರ್ಶಿಗಳು,** ಕಂದಾಯ ಇಲಾಖೆ (ಧಾರ್ಮಿಕ ದತ್ತಿ ವಿಭಾಗ), ಬೆಂಗಳೂರು | ಸದಸ್ಯರು |
| ೪. | **ನಿರ್ದೇಶಕರು,** ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯ, ಮೈಸೂರು | ಸದಸ್ಯರು |
| ೫. | **ಆಯುಕ್ತರು,** ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಬೆಂಗಳೂರು | ಸದಸ್ಯರು |
| ೬. | **ಪ್ರಾದೇಶಿಕ ನಿರ್ದೇಶಕರು,** ಯುಜಿಸಿ–ನೈರುತ್ಯ ಪ್ರಾದೇಶಿಕ ಕೇಂದ್ರ, ಬೆಂಗಳೂರು | ಸದಸ್ಯರು |
| ೭. | **ಪಂ. ಜಯತೀರ್ಥಾಚಾರ್ಯ ಮಳಗಿ,** ಧಾರವಾಡ | ಸದಸ್ಯರು |
| ೮. | **ಪ್ರೊ. ಎನ್. ಅಶ್ವತ್ಥಮ್ಮ,** ಮೈಸೂರು | ಸದಸ್ಯರು |
| ೯. | **ಡಾ. ಸಿದ್ಧಲಿಂಗ ಶಿವಾಚಾರ್ಯ ಮಹಾಸ್ವಾಮಿಗಳು,** ಕವಲೇದುರ್ಗ | ಸದಸ್ಯರು |
| ೧೦. | **ಶ್ರೀ ಡಿ. ಸುರೇಂದ್ರಕುಮಾರ್,** ಬೆಂಗಳೂರು | ಸದಸ್ಯರು |

ಸಭೆಯ ಪ್ರಾರಂಭಕ್ಕೆ ಮಾನ್ಯ ಕುಲಪತಿಗಳು ಎಲ್ಲ ಗೌರವಾನ್ವಿತ ಸದಸ್ಯರನ್ನು ಸ್ವಾಗತಿಸಿದರು. ಸಭೆಯಲ್ಲಿ ಕೆಳಕಂಡ ಕಾರ್ಯಸೂಚಿಗಳು ಮಂಡಿತವಾಗಿ ನಿರ್ಣಯಗೊಂಡವು.

**ವಿಷಯ 1: ಪ್ರಶಾಸನ ಸಮಿತಿ ಹನ್ನೆರಡನೇ ಸಭೆಯ ಅನುಪಾಲನಾ ವರದಿ.**

ಟಿಪ್ಪಣಿ: ದಿನಾಂಕ: 15.03.2013ರಂದು ನಡೆದ ವಿಶ್ವವಿದ್ಯಾಲಯದ ಪ್ರಶಾಸನ ಸಮಿತಿ ಹನ್ನೆರಡನೇ ಸಭೆಯಲ್ಲಿ ಮಂಡಿತವಾದ ವಿಷಯಗಳನ್ನು ಕುರಿತು ನಿರ್ಣಯಿಸಿದಂತೆ ಕ್ರಮಕೈಗೊಳ್ಳಲಾದ ಅನುಪಾಲನಾ ವರದಿ.

**ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ದಿನಾಂಕ: 18.03.2013ರಂದು ಅಧಿಸೂಚನೆಯನ್ನು ಹೊರಡಿಸಲಾಗಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ 2013–14ನೇ ಸಾಲಿನಿಂದ ಅನಧ್ಯಯನ ಪದ್ಧತಿಯನ್ನು ರದ್ದುಪಡಿಸಿ, ಯುಜಿಸಿ ನಿಯಮಾವಳಿಗಳಂತೆ ತರಗತಿಗಳು ನಡೆಯುವಂತೆ ಕ್ರಮಕೈಗೊಳ್ಳಲಾಗುತ್ತಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗಿದೆ. **ವಿಷಯ ಸಂಖ್ಯೆ 6**ಕ್ಕೆ ಸಂಬಂಧಿಸಿದಂತೆ ಪರಿನಿಯಮವನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಕಳುಹಿಸಲಾಗಿದೆ.

**ಅಧ್ಯಕ್ಷರ ಅಪ್ಪಣೆ ಮೇರೆಗೆ** ಚರ್ಚಿತವಾದ **ವಿಷಯ ಸಂಖ್ಯೆ 1**ಕ್ಕೆ ಸಂಬಂಧಿಸಿದಂತೆ ವಿನಿಯಮವನ್ನು ಮುಂದಿನ ಕ್ರಮಕ್ಕಾಗಿ ಸರ್ಕಾರಕ್ಕೆ ಸಲ್ಲಿಸಲಾಗಿದೆ. **ವಿಷಯ ಸಂಖ್ಯೆ 2**ಕ್ಕೆ ಸಂಬಂಧಿಸಿದಂತೆ ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 3**ಕ್ಕೆ ಸಂಬಂಧಿಸಿದಂತೆ ಸಮವಸ್ತ್ರ ಭತ್ಯೆಯನ್ನು 2013–14ನೇ ಸಾಲಿನಿಂದ ಪಾವತಿಸಲು ಕ್ರಮವಹಿಸಲಾಗುತ್ತಿದೆ. **ವಿಷಯ ಸಂಖ್ಯೆ 4**ಕ್ಕೆ ಸಂಬಂಧಿಸಿದಂತೆ ಉಸ್ಮಾನಿಯಾ ವಿಶ್ವವಿದ್ಯಾಲಯದ ಕುಲಪತಿಗಳಿಗೆ ಪತ್ರವನ್ನು ಕಳುಹಿಸಲಾಗಿದೆ. **ವಿಷಯ ಸಂಖ್ಯೆ 5**ಕ್ಕೆ ಸಂಬಂಧಿಸಿದಂತೆ ವಿಜಯವೈಜಯಂತಿ ಬಹುಮಾನ ಪಡೆದ ವಿದ್ಯಾರ್ಥಿಗಳನ್ನು ಅಭಿನಂದಿಸಲು ಕ್ರಮಕೈಗೊಳ್ಳಲಾಗಿದೆ.

ನಿರ್ಣಯ: **ಸಭೆಯು ಅನುಪಾಲನಾ ವರದಿಯನ್ನು ಪರಿಶೀಲಿಸಿ ತನ್ನ ಒಪ್ಪಿಗೆಯನ್ನು ನೀಡಿತು.**

**ವಿಷಯ 2: ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ಏರ್ಪಡಿಸುವ ಬಗೆಗೆ.**

ಟಿಪ್ಪಣಿ: 2011–12ನೇ ಸಾಲಿನ ವಿದ್ವತ್ ಪರೀಕ್ಷೆಗಳಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪದವಿ ಪ್ರಮಾಣಪತ್ರವನ್ನು ವಿತರಿಸಿ ದ್ವಿತೀಯ ದೀಕ್ಷಾಂತ ಘಟಿಕೋತ್ಸವ ಸಮಾರಂಭವನ್ನು ಬೆಂಗಳೂರಿನ ಜ್ಞಾನಜ್ಯೋತಿ ಸಭಾಂಗಣದಲ್ಲಿ ಜೂನ್ ಮೊದಲ ಅಥವಾ ಎರಡನೇ ವಾರದಲ್ಲಿ ನಡೆಸಬಹುದಾಗಿದೆ. ಘನತೆವೆತ್ತ ರಾಜ್ಯಪಾಲರಿಗೆ ಈ ಸಂಬಂಧವಾಗಿ ಪತ್ರವನ್ನು ಬರೆಯಬೇಕಾಗಿದೆ. ಎರಡನೆಯ ಘಟಿಕೋತ್ಸವ ಸಮಾರಂಭದಲ್ಲಿ ಗೌರವ ಡಾಕ್ಟರೇಟ್ ಪ್ರದಾನ ಮಾಡಲು ಹಿರಿಯ ವಿದ್ವಾಂಸರನ್ನು ಆಯ್ಕೆ ಮಾಡಬೇಕಾಗಿದೆ. ಆ ದಿನ ಘಟಿಕೋತ್ಸವ ಭಾಷಣ ಮಾಡಲು ಕರ್ನಾಟಕದ ಹಿರಿಯ ವಿದ್ವಾಂಸರನ್ನು ಆಹ್ವಾನಿಸಬಹುದಾಗಿದೆ. ಈ ಎಲ್ಲಾ ಕಾರ್ಯಕ್ರಮಗಳಿಗೆ ಆರು ಲಕ್ಷ ರೂ.ಗಳನ್ನು ಬಳಸಲು ಸಭೆಯ ಅನುಮೋದನೆಯನ್ನು ಕೋರಲಾಗಿದೆ.

ನಿರ್ಣಯ: **ಸಭೆಯ ಅಧ್ಯಕ್ಷತೆ ವಹಿಸಿದ್ದ ಕುಲಪತಿಗಳು ಪ್ರಥಮ ದೀಕ್ಷಾಂತ ಘಟಿಕೋತ್ಸವ ಸಮಾರಂಭ ವೈಭವದಿಂದ ನಡೆದುದಕ್ಕೆ ಸಭೆಗೆ ಕೃತಜ್ಞತೆಗಳನ್ನು ಸಲ್ಲಿಸಿದರು. ಅನಂತರ ಈ ಕೆಳಕಂಡ ನಾಲ್ವರು ವಿದ್ವಾಂಸರಿಗೆ ಗೌರವ ಡಾಕ್ಟರೇಟ್ ನೀಡಲು ಸಭೆಯು ಶಿಫಾರಸ್ಸು ಮಾಡಿತು. ಆದಷ್ಟೂ ಬೇಗ ಘನತೆವೆತ್ತ ರಾಜ್ಯಪಾಲರಿಗೆ ಈ ಸಂಬಂಧವಾಗಿ ಪತ್ರ ಬರೆದು ಒಪ್ಪಿಗೆ ಪಡೆಯಲು ಸಭೆ ಸೂಚಿಸಿತು. ಘಟಿಕೋತ್ಸವ ಭಾಷಣ ಮಾಡಲು ಹಿರಿಯ ವಿದ್ವಾಂಸರಾದ ಡಾ. ರಾಮಚಂದ್ರಭಟ್ಟ ಕೋಟೆಮನೆ ಅಥವಾ ವಿದ್ವಾನ್ ಜಿ. ಮಹಾಬಲೇಶ್ವರ ಭಟ್ಟ ಇವರನ್ನು ಆಹ್ವಾನಿಸಬಹುದೆಂದು ಸಭೆಯು ಒಪ್ಪಿಗೆಯನ್ನು ನೀಡಿತು.**

1. **ಪಂಡಿತ್ ಭಾಲಚಂದ್ರಶಾಸ್ತ್ರೀ ನಾಗೇಶಶಾಸ್ತ್ರೀ ಉಪ್ಪಿನ ಬೆಟಗೇರಿ ಜೋಶಿ, ಧಾರವಾಡ ಜಿಲ್ಲೆ (ನವೀನನ್ಯಾಯ)**
2. **ವಿದ್ವಾನ್ ಕೆ.ಎಸ್. ವರದಾಚಾರ್ಯ, ಮೈಸೂರು ಜಿಲ್ಲೆ (ವಿಶಿಷ್ಟಾದ್ವೈತವೇದಾಂತ)**
3. **ವಿದ್ವಾನ್ ಕೆ. ನಾರಾಯಣಶಾಸ್ತ್ರಿ ಬುಚ್ಚನ್, ಹೊನ್ನಾವರ, ಉತ್ತರ ಕನ್ನಡ ಜಿಲ್ಲೆ (ವೇದ, ಮೀಮಾಂಸಾ ಶಾಸ್ತ್ರ)**
4. **ಡಾ. ಎಂ. ಶಿವಕುಮಾರಸ್ವಾಮಿ, ಬೆಂಗಳೂರು ಜಿಲ್ಲೆ (ಶಕ್ತಿವಿಶಿಷ್ಟಾದ್ವೈತವೇದಾಂತ)**

**ಈ ದೀಕ್ಷಾಂತ ಘಟಿಕೋತ್ಸವ ಸಮಾರಂಭಕ್ಕೆ ತಗುಲುವ ಒಟ್ಟು ಅಂದಾಜು ವೆಚ್ಚ ಆರು ಲಕ್ಷ ರೂ.ಗಳಿಗೆ ಸಭೆಯು ತನ್ನ ಒಪ್ಪಿಗೆಯನ್ನು ನೀಡಿತು.**

**ಪ್ರೊ. ವೈ.ಎಸ್. ಸಿದ್ದೇಗೌಡ**
ಸದಸ್ಯ ಕಾರ್ಯದರ್ಶಿ

**ಪ್ರೊ. ಮಲ್ಲೇಪುರಂ ಜಿ. ವೆಂಕಟೇಶ**
ಅಧ್ಯಕ್ಷರು